ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಬುಧವಾರ, ದಿನಾಂಕ: 09ನೇ ಡಿಸೆಂಬರ್, 2020

ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಭೀಮಾ ನದಿಯ ಪ್ರವಾಹದ ಬಗ್ಗೆ

ಶ್ರೀ ಬಿ.ಜಿ. ಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

256 (301) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರುಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ಭೀಮಾ ನದಿ ಪ್ರವಾಹದಿಂದ ಭೀಮಾ ನದಿ ತೀರದಲ್ಲಿರುವ ಗ್ರಾಮಗಳು ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಳೇನು; (ಸಮಗ್ರ ಮಾಹಿತಿ ನೀಡುವುದು)

(ಆ) ಪ್ರವಾಹದಿಂದ ಎರಡೂ ಜಿಲ್ಲೆಗಳ ಎಷ್ಟು ಗ್ರಾಮಗಳಿಗೆ ಹಾನಿಯಾಗಿದೆ; (ತಾಲ್ಲೂಕುವಾರು ಸಮಗ್ರ ಮಾಹಿತಿ ನೀಡುವುದು)

(ಇ) ಮೇಲಿಂದ ಮೇಲೆ ಬರುತ್ತಿರುವ ಪ್ರವಾಹದಿಂದ ತತ್ತರಿಸಿ ಹೋಗಿರುವ ಗ್ರಾಮಗಳ ಸ್ಥಳಾಂತರಕ್ಕೆ ರಾಜ್ಯ ಸರ್ಕಾರ ಮುಂದಾಗಿದೆಯೇ; (ವಿವರ ನೀಡುವುದು)

(ಈ) ಪ್ರವಾಹದಿಂದ ಹಾನಿಗೊಳಗಾಗುತ್ತಿರುವ ಗ್ರಾಮಗಳಿಗೆ ಶಾಶ್ವತ ಪರಿಹಾರ ನೀಡುವುದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಮಗ್ರ ಮಾಹಿತಿ ನೀಡುವುದು)